<u>ಒ.ಎಸ್.ನಂಬ್ರ: 545/2021</u> <u>ಪಿ.ಡಬ್ಲ್ಯೂ: 1</u>

ದಿನಾಂಕಃ 19-11-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟಿ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್ ಎಸ್ ಎನ್ ರವರಿಂದ</u>

ದಾವಾ ಎ ಮತ್ತು ಬಿ ಶೆಡ್ಯೂಲ ಆಸ್ತಿಗಳು ಕೋಣಿ ಗ್ರಾಮದಲ್ಲಿ ಇದೆ ಎಂದರೆ ಸರಿ. ದಾವಾ ಎ ಶೆಡ್ಯೂಲ ಸ್ವತ್ತಿನ ದಕ್ಷಿಣಕ್ಕೆ ವಕ್ವಾಡಿ ಗ್ರಾಮದ ಗಡಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಪಟ್ಟಾ ಜಾಗ ಇದೆ ಎಂದು ನುಡಿದಿರುತ್ತಾರೆ. ನಮ್ಮ ಪಟ್ಟಾ ಜಾಗದ ಸರ್ವೆ ನಂ.218 ಆಗಿರುತ್ತದೆ. ನಾನು ಇದೇ ಪ್ರತಿವಾದಿಗಳ ವಿರುದ್ಧ ಕುಂದಾಪುರ ನ್ಯಾಯಾಲಯದಲ್ಲಿ ಓ ಎಸ್ 20/2024 ರಂತೆ ಕುಮ್ಕಿ ಹಕ್ಕಿನ ಕುರಿತು ದಾವೆ ಮಾಡಿರುತ್ತೇನೆ ಎಂದರೆ ಸರಿ. ಸರ್ವೆ ನಂ.143/1 ಎ ನಮ್ಮ ಕುಮ್ಕಿ ಜಾಗವಾಗಿದ್ದು ಅದಕ್ಕೆ ತೊಂದರೆ ಮಾಡಬಾರದು ಎಂದು ಆ ದಾವೆಯಲ್ಲಿ ಕೇಳಿರುತ್ತೇನೆ ಎಂದರೆ ಸರಿ. ಸರ್ವೆ ನಂ.143/1 ಎ ಉತ್ತರಕ್ಕೆ ಈ ದಾವೆಯ ಎ ಶೆಡ್ಯೂಲ ಆಸ್ತಿ ಬರುತ್ತದೆ ಎಂದರೆ ಸರಿ. ದಾವಾ ಎ ಶೆಡ್ಯೂಲ ಸ್ವತ್ತಿನ ದಕ್ಷಿಣಕ್ಕೆ ಸರ್ವೆ ನಂ. 143/1 ರ ಗಡಿ ಇದೆ ಎಂದರೆ ಸರಿಯಲ್ಲ.

ದಾವಾ ಎ ಮತ್ತು ಬಿ ಶೆಡ್ಯೂಲ ಸ್ವತ್ತುಗಳಿಗೆ ಹೋಗಿ ಬರಲು ಪಂಚಾಯತಿ ರಸ್ತೆ ಇರುವುದಿಲ್ಲ. ಓ ಎಸ್ ನಂ.20/2024 ರಲ್ಲಿ ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿ ಅದರೊಂದಿಗೆ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಕೆಲವೊಂದು ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಸರ್ವೆ ನಂ.143/1 ಎ ನಮ್ಮ ಕುಮ್ಕಿ ಹಕ್ಕಿನ ಸ್ಥಳವಲ್ಲ, ಅದು ಪ್ರತಿವಾದಿಗಳ ಕುಮ್ಕಿ ಹಕ್ಕಿನ ಸ್ಥಳವಾಗಿದೆ ಎಂದರೆ ಸರಿಯಲ್ಲ, ನಾನು ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಗೆ ಪ್ರತಿವಾದಿಗಳು ಆಕ್ಷೇಪ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಆಕ್ಷೇಪ ಮಾಡಿದ್ದಕ್ಕೆ ಕಂದಾಯ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಮಹಜರು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಮಹಜರಿನಲ್ಲಿ ಸರ್ವೆ ನಂ.143/1 ಎ ಉತ್ತರಕ್ಕೆ ಮತ್ತು ನಮ್ಮ ಸ್ವತ್ತಿನ ದಕ್ಷಿಣಕ್ಕೆ ಪಂಚಾಯತಿ ರಸ್ತೆ ಇದೆ ಎಂದು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಂಚಾಯತಿ ರಸ್ತೆ ಇಲ್ಲ ಎಂದು ನುಡಿದಿರುತ್ತಾರೆ.

ಮಹಜರಿನಲ್ಲಿ ಸರ್ವೆ ನಂ.143/1 ಎ ನ ಪೂರ್ವ ಪಶ್ಚಿಮಾಭಿಮುಖವಾಗಿ ಈ ದಾವೆಯ ಎ ಶೆಡ್ಯೂಲ ಸ್ವತ್ತಿನ ದಕ್ಷಿಣಕ್ಕೆ ಪಂಚಾಯತಿ ರಸ್ತೆ ಹಾದುಹೋಗಿರುತ್ತದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಮಹಜರಿನ ಬಗ್ಗೆ ನಾನು ಹೆಚ್ಚಾಗಿ ತಿಳಿದುಕೊಂಡಿರುವುದಿಲ್ಲ. ಈ ದಾವೆಯ ಎ ಶೆಡ್ಯೂಲ ಸ್ವತ್ತಿನ ದಕ್ಷಿಣ ದಿಕ್ಕಿಗೆ

ಪಂಚಾಯತಿ ರಸ್ತೆ ಇದ್ದು, ಅದರಲ್ಲಿ ಸಾರ್ವಜನಿಕರು ಓಡಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ದಿಶಾಂಕ ನಕ್ಷೆಯನ್ನು ನೋಡಿರುವುದಿಲ್ಲ. ದಾವಾ ಬಿ ಶೆಡ್ಯೂಲ ಸ್ವತ್ತಿನ ಉತ್ತರಕ್ಕೆ ಬರುವ ಸರ್ವೆ ನಂಬರ ನನಗೆ ಗೊತ್ತಿಲ್ಲ. ನಿಪಿ-2 ರ ದಾಖಲೆಯ ಜೊತೆಗೆ ಒಂದು ನಕ್ಷೆ ಇದೆ ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ಆ ನಕ್ಷೆಯನ್ನು ತೋರಿಸಿ ಅದರಲ್ಲಿ ದಾವಾ ಬಿ ಶೆಡ್ಯೂಲ ಸ್ವತ್ತಿನ ಸರ್ವೆ ನಂ.199/206 ಇದೆ ಎಂದರೆ ಸಾಕ್ಷಿಯು ನನಗೆ ನಕ್ಷೆ ನೋಡಿ ಹೇಳಲು ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ.

ಈ ದಾವೆ ಹಾಕುವಾಗ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ದಾವಾ ಎ ಮತ್ತು ಬಿ ಶೆಡ್ಯೂಲ ಸ್ವತ್ತುಗಳ ಚೆಕ್ಕುಬಂದಿಯ ಕುರಿತು ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ದಾವ ಬಿ ಶಡ್ಯೂಲ ಸ್ವತ್ತಿನ ಚೆಕ್ಕುಬಂದಿ ದಕ್ಷಿಣಕ್ಕೆ ಸರ್ವೆ ನಂ. 143/ಎ1, ಉತ್ತರಕ್ಕೆ ನಮ್ಮದೇ ಜಾಗ ಸರ್ವೆ ನಂ.207/12, ಪಶ್ಚಿಮಕ್ಕೆ ದೇವಕಿ ಶೆಡ್ತಿ ಅವರ ಜಾಗ ಸರ್ವೆ ನಂಬರ ಗೊತ್ತಿಲ್ಲ ಮತ್ತು ಪೂರ್ವಕ್ಕೆ ನಮ್ಮಕ್ಕೆ ಜಾಗ ಸರ್ವೆ ನಂ. 207/10 ಇರುತ್ತದೆ. ನನಗೆ ದಾವಾ ಬಿ ಶೆಡ್ಯೂಲ ಸ್ವತ್ತಿನ ಗಡಿಗಳ ಬಗ್ಗೆ ಗೊತ್ತಿರುತ್ತದೆ. ನಾನು ಹೇಳಿದ ಈ ಗಡಿಗಳಿಗೂ, ನಿಪಿ-2 ರ ದಾಖಲೆಯಲ್ಲಿನ ಗಡಿಗಳಿಗೂ ಮತ್ತು ವಾದ ಪತ್ರದಲ್ಲಿ ನಮೂದಿಸಿರುವ ಬಿ ಶೆಡ್ಯೂಲ ಸ್ವತ್ತಿನ ಗಡಿಗಳು ವ್ಯತಿರಿಕ್ತವಾಗಿದೆ ಎಂದರೆ ಸರಿಯಲ್ಲ. ನಾನು ಹೇಳಿದ ಉತ್ತರದ ಗಡಿಗಳಿಗೂ, ನಿಪಿ-2 ರ ದಾಖಲೆಯಲ್ಲಿನ ಉತ್ತರದ ಗಡಿಗಳಿಗೂ ಮತ್ತು ವಾದ ಪತ್ರದಲ್ಲಿ ನಮೂದಿಸಿರುವ ಬಿ ಶೆಡ್ಯೂಲ ಸ್ವತ್ತಿನ ಉತ್ತರದ ಗಡಿಗಳು ವ್ಯತಿರಿಕ್ತವಾಗಿದೆ ಎಂದರೆ ಸರಿಯಲ್ಲ.

ನಾನು ಬಿ ಶೆಡ್ಯೂಲ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಪಿ-2 ರ ದಾಖಲೆ ಬಿ ಶೆಡ್ಯೂಲ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿಪಿ-2 ರ ದಾಖಲೆಗೂ ಮತ್ತು ದಾವಾ ಬಿ ಶೆಡ್ಯೂಲ ಸ್ವತ್ತಿನ ಸರ್ವೆ ನಂಬರಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕಲ್ಪಿಸಲಾಯಿತು.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ .